**CW : 3**

ಹೆಚ್ಚುವರಿ  ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ

# CC No. 2099 /2019

| | | |
|---|---|---|
| ಸಾಕ್ಷಿದಾರರ ಹೆಸರು | : | ಕೃಷ್ಣಪ್ಪ |
| ತಂದೆಯ ಹೆಸರು | : | ಫಕೀರ |
| ಪ್ರಾಯ | : | 32 ವರ್ಷ |
| ಉದ್ಯೋಗ | | ಕೂಲಿ  ಕೆಲಸ |
| ವಾಸಸ್ಥಳ | : | ಕಕ್ಕೂರು ಮನೆ,   ಬೆಟ್ಟಂಪಾಡಿ ಗ್ರಾಮ |

ದಿನಾಂಕಃ**21.11.2024**ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆಃ  ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದಃ

ಸಾಕ್ಷಿಗೆ ನಿಸಿ-1 ದಾಖಲೆ ತೋರಿಸಲಾಗಿ ಅದರಲ್ಲಿ ತನ್ನ ಸಹಿ ಇರುವುದನ್ನು ಒಪ್ಪಿದ್ದು ಸಾಕ್ಷಿಯ ಸಹಿಯನ್ನು ನಿಸಿ-1 ಸಿ ಎಂದು ಗುರುತಿಸಲಾಯಿತು. ನಿಸಿ-1 ಕ್ಕೆ ನಾನು ದಿ. 24-06-2023 ರಂದು ಬೆಟ್ಟಂಪಾಡಿ ಗ್ರಾಮದ ಕಕ್ಕೂರಿನ ವೆಂಕಟರಮಣ ಭಟ್ಟರವರ ಬಿದ್ದುಹೋದ ಮನೆಯ ಹತ್ತಿರ ಸಹಿ ಮಾಡಿದ್ದೇನೆ.  ಸ್ಥಳಕ್ಕೆ ಪುತ್ತೂರು ಗ್ರಾಮಾಂತರ ಪೋ. ಠಾಣೆಯ ಎ ಎಸ್ ಐ ಮಹಮದ್ ಅಲಿ ರವರು ಬಂದಿದ್ದರು.  ಎ ಎಸ ಐ ರವರು ಸ್ಥಳದಲ್ಲಿ ಆರೋಪಿಯ ಬಗ್ಗೆ ಟಾಮ್ ಟಾಮ್ ಮಾಡಿಸಿ ಮಹಜರ್ ಮಾಡಿದರು.  ಸ್ಥಳದಲ್ಲಿ ಎ ಎಸ್ ಐ ರವರು ಬಿದ್ದುಹೋದ ಮನೆಯ ಗೋಡೆಯ ಮೇಲೆ ನೋಟೀಸ್ ಅಂಟಿಸಿ ಆರೋಪಿ ವೆಂಕಟರಮಣ ಭಟ್ಟ 30 ದಿನದೊಳಗೆ ನ್ಯಾಯಾಲಯಕ್ಕೆ ಹಾಜರಾಗಬೇಕು ಎಂದು ಟಾಮ್ ಟಾಮ್ ಮಾಡಿಸಿದರು.  ನಂತರ ಬೆಟ್ಟಂಪಾಡಿ ಗ್ರಾಮ ಪಂಚಾಯಿತಿ ನೋಟೀಸ್ ಬೋರ್ಡ್ ಗೂ ಕೂಡಾ ಸದರಿ ನೋಟೀಸ್ ಅಂಟಿಸಲಾಯಿತು.   ನನ್ನ ಸಂಗಡ ನಿಸಿ-1 ದಾಖಲೆಗೆ ಗೋಪಣ್ಣ ಶೆಟ್ಟಿ ಎನ್ನುವವರೂ ಸಹ ಸಹಿ ಮಾಡಿದ್ದಾರೆ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.